# ‘ಸುಧಾ’ ಜೊತೆಗಿನ ಓದುಗರ ಒಡನಾಟ

## ಅರಿವಿನ ಹರವು ವಿಸ್ತರಿಸಿದೆ

ಪ್ರತಿ ಗುರುವಾರ ಬರುವ ‘ಸುಧಾ’ಳ ಮುಖಪುಟ ಕಂಡಾಗ ಏನೋ ಪುಳಕ. ‘ಸುಧಾ’ ಹೊತ್ತುತರುವ ವೈವಿಧ್ಯಮಯ ಅಂಕಣಗಳು, ಲೇಖನಗಳು, ಕಥೆ, ಪ್ರಶ್ನೋತ್ತರ, ಸಮಾಜದ ಓರೆಕೋರೆ ತಿದ್ದುವ ‘ನೀವು ಕೇಳಿದಿರಿ’ ವಿಭಾಗ, ಹಿಂದೆ ತಜ್ಞ ವಿನೋದ ಛಬ್ಬಿ ಅವರು ಓದುಗರ ಲೈಂಗಿಕ ವಿಷಯಕ್ಕೆ ನಿರ್ಭಿಡೆಯಿಂದ ಉತ್ತರಿಸುತ್ತಿದ್ದ ಅಂಕಣ, ವಿಚಾರ ಲಹರಿ ಮತ್ತು ನಿಮ್ಮೊಡನೆ ಪ್ರಬುದ್ಧ ಬರಹಗಳು ನನ್ನ ಅರಿವಿನ ಹರವನ್ನು ವಿಸ್ತರಿಸಿವೆ. ಓದುಗರ ಸಂಖ್ಯೆ ಕಡಿಮೆಯಾಗುತ್ತಿರುವ ಈ ಕಾಲಘಟ್ಟದಲ್ಲಿ ನನಗಂತೂ ‘ಸುಧಾ’ ದಾರಿದೀಪದಂತಿದೆ. ‘ಸುಧಾ’ ಹೀಗೆಯೇ ಪ್ರಬುದ್ಧಮಾನಳಾಗಿ ನನ್ನಂತಹ ಅಸಂಖ್ಯಾತ ಓದುಗರ ಸಾಹಿತ್ಯಾಸಕ್ತಿಯನ್ನು ತಣಿಸಲಿ.

—ಕೇಶವ ಪ್ರಭು

## ಅದೇ ಉತ್ಸಾಹದ ‘ಸುಧಾ’

ನನ್ನ ಮತ್ತು ‘ಸುಧಾ’ ಸ್ನೇಹ ಆರಂಭವಾದದ್ದು 1972ರಲ್ಲಿ. ಆಗ ನಾವು ಮಧ್ಯಪ್ರದೇಶದ ಕೊರ್ಬಾ ಎಂಬಲ್ಲಿದ್ದೆವು. ಅಪರೂಪಕ್ಕೊಮ್ಮೆ ಯಾರ ಮನೆಯಲ್ಲಾದರೂ ‘ಸುಧಾ’ ಓದಲು ಸಿಗುತ್ತಿತ್ತು. ‘ಸುಧಾ’ ಪೋಸ್ಟಲ್‌ನಲ್ಲಿ ಕೊಳ್ಳಬಹುದು, ವರ್ಷ ಪೂರ್ತಿಯ ಚಂದಾದಾರಿಕೆ 21 ರೂ ಎಂಬುದು ತಿಳಿದುಬಂತು. ಸರಿ, ತಡಮಾಡದೆ ಚಂದಾದಾರಳಾದೆ. ಮುಂದಿನ ವಾರದಿಂದಲೇ ‘ಸುಧಾ’ ಪೋಸ್ಟ್‌ನಲ್ಲಿ ಬರಲು ಶುರುವಾಯ್ತು. ಆಗ ‘ಕಣ್ಮಣಿ’ ಎಂಬ ಧಾರಾವಾಹಿ ಶುರುವಾಗಿತ್ತು. ಪ್ರತಿವಾರ ಕೆಲಸ ಮುಗಿಸಿ ಕಾದು ‘ಸುಧಾ’ ಓದಿ ಮುಂದಿನ ವಾರದ ತನಕ ಕಾಯುತ್ತಿದ್ದೆ. ಈಗಲೂ ಅದೇ ಕಾತುರತೆ, ಉತ್ಸಾಹ ಇದೆ. ಈಗ ಬೆಂಗಳೂರಿನಲ್ಲೇ ವಾಸವಾಗಿದ್ದೇನೆ. ಪ್ರತಿ ಗುರುವಾರ ಬರುವ ‘ಸುಧಾ’ಳನ್ನು ಸ್ವಾಗತಿಸಿ ಅಷ್ಟೇ ಆಸಕ್ತಿಯಿಂದ ಓದುತ್ತೇನೆ. ಮನಸ್ಸು ತೃಪ್ತಿಯಾಗುತ್ತದೆ. ಧನ್ಯವಾದಗಳು ‘ಸುಧಾ’, ನಿನ್ನ ಸುಂದರ ಒಡನಾಟಕ್ಕೆ. ನಿನ್ನ ಆತ್ಮೀಯ ಗೆಳತಿ,

—ಉಷಾ ರಾಜಾ ರಾವ್, ಬೆಂಗಳೂರು

## ನೆಚ್ಚುಗೆಯ ಪತ್ರಿಕೆ

ಮುಂಬೈನಲ್ಲಿ ‘ಸುಧಾ’ಳನ್ನು ಮೀರಾರೋಡ್‌ನಿಂದ ಚರ್ಚ್‌ಗೇಟ್ ಅಥವಾ ವಿಟಿಗಾಗೇ ಹೋಗಿ ಖರೀದಿಸುತ್ತಿದ್ದ ನೆನಪು. ‘ಸುಧಾ’ದ ಎಲ್ಲ ಲೇಖನಮಾಲೆಗಳೂ ನನಗೆ ಮೆಚ್ಚು. ಪದಬಂಧ ನನ್ನ ಫೇವರೆಟ್. ಬೆಂಗಳೂರಿಗೆ ಬಂದ ಮೇಲೆ ಬಸ್ ಪ್ರಯಾಣದಲ್ಲಿ ಗುರುವಾರವೇ ‘ಸುಧಾ’ ಪೂರ್ತಿ ಓದಿ ಮುಗಿಸುತ್ತಿದ್ದೆ.

— ಎಚ್.ಎಸ್. ಶಿವಶಂಕರ್, ಬೆಂಗಳೂರು

## ಮರೆಯಲಾಗದ ಆ ದಿನ

1965ರಲ್ಲಿ ಆಗತಾನೆ ನನ್ನ ವಿದ್ಯಾಭ್ಯಾಸ ಮುಗಿಸಿ ಬೆಂಗಳೂರಿನಲ್ಲಿ ಉದ್ಯೋಗಕ್ಕಾಗಿ ಪರದಾಡುತ್ತಿದ್ದೆ. ಹೊಸದಾಗಿ ಪ್ರಕಟಣೆ ಆಗುತ್ತಿದ್ದ ‘ಸುಧಾ’ ಪತ್ರಿಕೆಯಲ್ಲಿನ ಇತರರ ವ್ಯಂಗ್ಯಚಿತ್ರಗಳನ್ನು ನೋಡಿ ನಾನೂ ನನ್ನ ರಚನೆಗಳನ್ನು ಕಳುಹಿಸಿದೆ.




ನನ್ನ ವ್ಯಂಗ್ಯಚಿತ್ರಗಳು ಪ್ರಕಟಗೊಂಡು ಸಂಭಾವನೆ ರೂಪದಲ್ಲಿ ರೂ. 25 ಬ್ಯಾಂಕ್ ಚೆಕ್ ಸಹ ನನಗೆ ನೀಡಲಾಯಿತು. ಒಂದು ಕಡೆ ನನ್ನ ವ್ಯಂಗ್ಯಚಿತ್ರಗಳು ಪ್ರಕಟಣೆಯಾದ ಖುಷಿ, ಮತ್ತೊಂದು ಕಡೆ ಸಂಭಾವನೆಯ ಖುಷಿ. ಅಂದಿನ ಸಂತೋಷ ಹೇಳತೀರದು. ನಂತರ ಉದ್ಯೋಗಕ್ಕಾಗಿ ಮಧ್ಯ ಪ್ರದೇಶಕ್ಕೆ ತೆರಳಬೇಕಾಯಿತು. ಕೆಲಸದ ಒತ್ತಡದಲ್ಲೂ ವ್ಯಂಗ್ಯಚಿತ್ರಗಳನ್ನು ಅಂಚೆ ಮೂಲಕ ಕಳುಹಿಸುತ್ತಿದ್ದೆ. ನನ್ನ ಚಿತ್ರಗಳು ಪ್ರಕಟಣೆಯಾದ ‘ಸುಧಾ’ ಪತ್ರಿಕೆ ಅಂಚೆ ಮೂಲಕ ಮನೆಗೆ ಬರುತ್ತಿತ್ತು. ನಂತರ ನನ್ನ ಅನೇಕ ಚಿತ್ರಗಳು ಪ್ರಕಟಗೊಂಡವು. ಆರು ದಶಕಗಳ ಅವಧಿಯಲ್ಲಿ ನಾನೊಬ್ಬ ಹವ್ಯಾಸಿ ವ್ಯಂಗ್ಯಚಿತ್ರಕಾರನಾಗಿ ಗುರುತಿಸಿಕೊಂಡು ಹಲವು ಪ್ರಶಸ್ತಿಗಳು ದೊರಕಿದ್ದರೂ ಅಂದು ಮೊದಲ ಬಾರಿಗೆ ನನ್ನ ವ್ಯಂಗ್ಯಚಿತ್ರಗಳು ಪ್ರಕಟವಾಗಿದ್ದನ್ನು ಮರೆಯುವಂತಿಲ್ಲ.

—ಬಿ.ವಿ. ಪಾಂಡುರಂಗ ರಾವ್

## ಸ್ನೇಹಿತೆ ‘ಸುಧಾ’

16ನೇ ವಯಸ್ಸಿನಲ್ಲೇ ‘ಸುಧಾ’ ಓದಲು ಆರಂಭಿಸಿದೆ. ಅನುಪಮಾ ನಿರಂಜನ ಅವರ ‘ಸ್ನೇಹಪಲ್ಲವಿ’ ಕಾದಂಬರಿ, ಆ ವಯಸ್ಸಿನಲ್ಲಿ ಎಷ್ಟು ರೋಮಾಂಚಕರವಾಗಿತ್ತು! ಅದರ ಅನುಭವ ಹೇಳಲಾಗದು. ‘ಬಾಲವಿಹಾರ’ ವಿಭಾಗದಲ್ಲಿ ಬರುತ್ತಿದ್ದ ಕಪೀಶನ ಚಿತ್ರಕಥೆ ನನ್ನ ಮಕ್ಕಳಿಗೆ ಊಟ ತಿನ್ನಿಸಲು ಬಹಳ ಸಹಕಾರಿಯಾಗುತ್ತಿತ್ತು. ಈ ದಿನದವರೆಗೂ ‘ಸುಧಾ’ ಓದು ನನ್ನ ಜೊತೆಗಿದೆ.

—ವಿಜಯಲಕ್ಷ್ಮೀ, ಬೆಂಗಳೂರು

## ಬರಹಗಾರರಿಗೆ ‘ಸುಧಾ’ ಪ್ರೋತ್ಸಾಹ

ನಾನು ವಿದ್ಯಾರ್ಥಿದೆಸೆಯಲ್ಲಿದ್ದಾಗ ಸ್ನೇಹಿತರ, ಸಂಬಂಧಿಕರ ಮನೆಯಲ್ಲಿ, ಗ್ರಂಥಾಲಯಕ್ಕೆ ಹೋಗಿ ‘ಸುಧಾ’ ಓದುತ್ತಿದ್ದೆ. ಅದರಲ್ಲಿನ ವೈವಿಧ್ಯಮಯ ವಿಚಾರಕ್ಕೆ ಆಕರ್ಷಿತನಾಗಿದ್ದೆ. ನೌಕರಿ ದೊರೆತ ನಂತರ ನಾನೇ ತರಿಸಿಕೊಂಡು ಓದಲು ಶುರು ಮಾಡಿದೆ. ಇಂದಿನವರೆಗೂ ಓದು ನಿರಂತರವಾಗಿದೆ. ‘ಸುಧಾ’ ಪೂರ್ತಿ ನಾನು ಓದದೇ ಬೇರೆಯವರಿಗೆ ಕೊಡುವುದಿಲ್ಲ.

ನನ್ನ ಅದೆಷ್ಟೋ ಚುಟುಕುಗಳು, ಕಿರುನಗೆ ಲೇಖನಗಳು, ನಿಮ್ಮ ಪುಟದ ವಿಶಿಷ್ಟ ಚಿತ್ರಲೇಖನಗಳು ‘ಸುಧಾ’ದಲ್ಲಿ ಪ್ರಕಟವಾಗಿವೆ. ಬರಹಗಾರರಿಗೆ ಪ್ರೋತ್ಸಾಹಿಸುವ ‘ಸುಧಾ’ ಸದಾ ನನ್ನ ಮೆಚ್ಚುಗೆಗೆ ಪಾತ್ರ.

—ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ

## ಆಲ್ ರೌಂಡರ್

ಕ್ರಿಕೆಟ್ ಆಟದಲ್ಲಿ ಒಬ್ಬ ಆಲ್ ರೌಂಡರ್ ಇದ್ದಂತೆ, ನಮಗೆ ‘ಸುಧಾ’. ಓದುಗರಿಗೆ ಎಲ್ಲಾ ಪ್ರಕಾರದ ಸಾಹಿತ್ಯವನ್ನು ಉಣಬಡಿಸುತ್ತದೆ. ಹಾಗೆಯೇ ಕಾಲಕ್ಕೆ ತಕ್ಕಂತೆ ತನ್ನ ಶೈಲಿಯನ್ನು ಬದಲಿಸಿಕೊಂಡು ಹೊಸತನವನ್ನು ತೋರುತ್ತಿದೆ.

—ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ

## ಕಾಯಂ ಅತಿಥಿ

ಆಗ 12 ವರ್ಷದ ಬಾಲಕರಾದ ನಮಗೆ ಓದಿನ ಗೀಳು. ಗ್ರಂಥಾಲಯಕ್ಕೆ ಸಂಜೆ ನಮ್ಮ ಭೇಟಿ. ವಾರಪತ್ರಿಕೆ, ಮಾಸಪತ್ರಿಕೆಗಳನ್ನು ಟೇಬಲ್ ಮೇಲೆ ಸಾಲಾಗಿ ಕಟ್ಟಿರುತ್ತಿದ್ದರು. ಯಾರೂ ಪತ್ರಿಕೆಗಳನ್ನು ಒಯ್ಯಬಾರದೆಂದು! ಅದರಲ್ಲಿ ‘ಸುಧಾ’ ನಮ್ಮ ಮೆಚ್ಚಿನದು. ಹೊಸ ‘ಸುಧಾ’ ಬಂದಾಗಲಂತೂ ಓದಲು ಪಾಳಿ! ನಾವು ಓದುತ್ತಾ ಕುಳಿತವರನ್ನು, ನಿಮ್ಮ ನಂತರ ನನಗೇ ಓದಲು ಕೊಡಿ ಎಂದು ವಿನಂತಿಸುತ್ತಿದ್ದೆವು. ಕಾಮಿಕ್ಸ್, ಫ್ಯಾಂಟಮ್, ಮಕ್ಕಳ ಕಥೆಗಳನ್ನು ಓದುವುದೆಂದರೆ ಎಲ್ಲಿಲ್ಲದ ಖುಷಿ! ‘ಸುಧಾ’ ಈಗಲೂ ನಮ್ಮನೆಯ ಕಾಯಂ ಅತಿಥಿ!

—ವೀರೇಶ ಬಂಗಾರಶೆಟ್ಟರ, ಕುಷ್ಟಗಿ